3	ಪಿರಿಯಾಪಟ್ಟಣ ತಾಲ್ಲೂಕು	19.60
4	ಪುತ್ತೂರು ತಾಲ್ಲೂಕು	9.50
5	ಸುಳ್ಯ ತಾಲ್ಲೂಕು	5.20
		56.90
	ಇದಲ್ಲದೇ "3054 ರಸ್ತೆ ಮತ್ತು ಸೇತುವೆ ಯೋಜನೇತರ" ದಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ಮಾಡಲಾಗುವ ಮರು ಡಾಂಬರೀಕರಣ	9.42 ಕಿಮೀ
	ಒಟ್ಟು	66.32 ಕಿಮೀ.

2. ವಿವಿಧ ಯೋಜನೆಯಲ್ಲಿ ಮಾಡುವ ವೆಚ್ಚ ಕೆಳಗಿನಂತಿದೆ.

1) ಹುಡ್ಕೋ ಸಾಲದಿಂದ 3 ಸಾಲಿನ ರಾಜ್ಯ ಹೆದ್ದಾರಿ ನಿರ್ವಹಣೆಯಲ್ಲಿ :	209 ಲಕ್ಷ ರೂ.
2) "3054" ಯೋಜನೇತರ ಅನುದಾನದಲ್ಲಿ	145 ಲಕ್ಷ ರೂ.
	454 ಲಕ್ಷ ರೂ.

3. ಪಿರಿಯಾಪಟ್ಟಣ ಕ್ಷೇತ್ರದಲ್ಲಿ 27.10 ಕಿಮೀ. ರಾಜ್ಯ ಹೆದ್ದಾರಿಯ ಪೈಕಿ 19.60 ಕಿಮೀ.ನಲ್ಲಿ ಸಿ.ಬಿ.ಆರ್.ತೃಪ್ತಿಕರವಾಗಿದ್ದು ಮರು ಡಾಂಬರೀಕರಣ ಮಾಡಲಾಗುವುದು. ಇದರಲ್ಲಿ 6.90 ಕಿಮೀ ಉದ್ದ ಮರು ಡಾಂಬರೀಕರಣ ಪೂರ್ಣಗೊಂಡಿದ್ದು ಕಾಮಗಾರಿಗಳನ್ನು 5-2002ರೊಳಗೆ ಪೂರ್ಣಗೊಳಿಸಲಾಗುವುದು.

ಪಿರಿಯಾಪಟ್ಟಣದ ಅರಣ್ಯ ಭೂಮಿಯಲ್ಲಿ ವಿದ್ಯುಚ್ಛಕ್ತಿ ಕಾಮಗಾರಿ ತಡೆಹಿಡಿದಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 700(72)

ಸದಸ್ಯರ ಹೆಸರು : ಶ್ರೀ ಹೆಚ್.ಸಿ.ಬಸವರಾಜು(ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು : ಶ್ರೀ ಕೆ.ಎಚ್.ರಂಗನಾಥ(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

ಅ) ಪಿರಿಯಾಪಟ್ಟಣ ಏತ ನೀರಾವರಿ ಕಾಮಗಾರಿ ಯೋಜನೆಯ ವಿದ್ಯುಚ್ಛಕ್ತಿ ಕಾಮಗಾರಿಯನ್ನು ಅರಕಲಗೂಡು ತಾ:ಗೊಬ್ಬಳಿ ಕಾವಲ್ ಸ.ನಂ.1ರಲ್ಲಿ ಹಾಗೂ ಪಿರಿಯಾಪಟ್ಟಣ ತಾ:ಚನ್ನಕಲ್ ಗ್ರಾಮದ ಸ.ನಂ.30ರಲ್ಲಿ ಅರಣ್ಯ ಇಲಾಖೆಯವರು ತಡೆ ಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ತಡೆ ಹಿಡಿದಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ಕಾರಣ ತಿಳಿದಿದ್ದಲ್ಲಿ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಉತ್ತರ

ಅ) ಹೌದು.

ಆ) ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್ 2 ರಂತೆ ಅರಣ್ಯ ಪ್ರದೇಶವನ್ನು ಅರಣ್ಯೇತರ ಚಟುವಟಿಕೆಗಳಿಗೆ ಬಿಡುಗಡೆ ಮಾಡಬೇಕಾದರೆ ಭಾರತ ಸರ್ಕಾರದ ಪೂರ್ವಾನುಮತಿ ಅವಶ್ಯವಿದೆ. ಅದು ಇನ್ನು ಪ್ರಾಪ್ತವಾಗಿಲ್ಲ ಆದ್ದರಿಂದ ತಡೆಹಿಡಿಯಲಾಗಿದೆ.

ಇ) ಈ ಮೇಲಿನ ಉತ್ತರ ಅನ್ವಯವಾಗುತ್ತದೆ.

ಪಿರಿಯಾಪಟ್ಟಣ ನಗರದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 701(74)

ಸದಸ್ಯರ ಹೆಸರು : ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು : ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು)